

ಮಾರಾಯ. ಹದಿನಾಲ್ಕು ಡಿಗ್ರಿಗೆ ಇಳಿದಿದೆ. ಕಾಫಿ ಕೆಳಗಿಟ್ರೆ ತಣ್ಣಗಾಗಿ ಬಿಡುತ್ತೆ. ಕುಡಿದು ಬಿಡು' ಎಂದಳು ಅಕ್ಕರೆಯಿಂದ. ಅವನು ಹೆಚ್ಚು ಉಪಚರಿಸಿಕೊಳ್ಳದೆ ಕಾಫಿಯನ್ನು ಮುಗಿಸಿದ. ಅವಳು ಅವನ ಎದುರಾಗಿಯೇ ಕುಳಿತು, 'ನೀನು ಬರ್ತಿಯಾಂತ ನಾನು ಅಂದುಕೊಂಡೇ ಇರಲಿಲ್ಲ. ಅದಕ್ಕೆ ನಾನು ನಿನಗೆ ಏನೋ ಸರ್‌ಪ್ರೈಸ್ ಇದೆಂತ ಮೆಸೇಜ್ ಮಾಡಿದ್ದೆ ಮಾರಾಯಾ. ನೀನು ಅದನ್ನು ನಂಬಿದ್ಯಾ?' ಎಂದಳು ಮುಗುಳ್ನಗು ತಂದುಕೊಂಡು.

'ಇಲ್ಲ ಪದ್ಮಾ, ನನ್ನ ರಜೆಗಳು ಹಾಳಾಗ್ತಿದ್ವು. ಬೆಂಗಳೂರಿಗೆ ಬರದೆ ವರ್ಷದ ಮೇಲಾಯ್ತು. ಹಾಗೇ ಒಂದು ಪ್ಲಾನ್ ಮಾಡ್ಕೊಂಡು ಬಂದೆ. ನನ್ನ ಹಳೆ ವಿದ್ಯಾರ್ಥಿಗಳು ಈವಾಗ ಇಲ್ಲಿಯೇ ಡಿಗ್ರಿ ಓದ್ತಾ ಇದ್ದಾರೆ. ಅವರು ಕೂಡ ನನ್ನನ್ನು ಬರೋದಿಕ್ಕೆ ಹೇಳ್ತಾನೇ ಇದ್ದಾರೆ. ಅವರನ್ನೂ ಭೇಟಿಯಾಗ್ಬೇಕೂಂತನು ಬಂದೆ' ಎಂದ. ಪದ್ಮಾಳ ಮುಖದಲ್ಲಿದ್ದ ಕಳೆ ಕಂತಿತು ಅವನ ಮಾತಿಗೆ.

'ಹಾಗಾದ್ರೆ ನೀನು ಇವತ್ತು ರಾತ್ರಿ ನ್ಯೂ ಇಯರ್ ಪಾರ್ಟಿಗೆ ಇರೊಲ್ವಾ?' ಎಂದಳು ನಿರಾಶೆಯಿಂದ.

'ಇರ್ತೀನಿ, ಹೇಗಿದ್ರೂ ನನ್ನ ಕೆಲಸಗಳನ್ನೆಲ್ಲಾ ಮುಗಿಸ್ಕೊಂಡು ಹೋಗ್ಬೇಕೂಂತ ಒಂದೆರಡು ದಿವಸ ರಜೆ ಎಕ್ಸ್‌ಟೆಂಡ್ ಮಾಡಿದ್ದೀನಿ ಬಿಡು, ಸಂಜೆ ಪಾರ್ಟಿಗೆ ಇರ್ತೀನಿ' ಎಂದ ಅವಳ ನಿರಾಶೆಯನ್ನು ಶಮನಗೊಳಿಸುವಂತೆ. ಅವಳಲ್ಲಿ ಮತ್ತೆ ಲವಲವಿಕೆ ಮೂಡಿತು. ಕಾಲಿಗೆ ಚಕ್ರ ಕಟ್ಟಿಕೊಂಡಂತೆ ಓಡಾಡತೊಡಗಿದಳು. ಹರೀಶ್ ಸಣ್ಣದೊಂದು ನಿದ್ದೆ ಮಾಡಿ ಆರಾಮ ಮಾಡಿಕೊಂಡ. ಎಚ್ಚರವಾದ ಬಳಿಕ ಸ್ವಲ್ಪ ಹೊತ್ತು ಹೊರಗೆ ಅಡ್ಡಾಡಿ ಬರುವುದಾಗಿ ಹೇಳಿದ. ಪದ್ಮಾ ತಾನೂ ಬರುವುದಾಗಿ ಹೇಳಿದಳು. ಅವನಿಗ್ಯಾಕೋ ಅವಳಿಗೆ ತೊಂದರೆ ಕೊಡುವುದು ಬೇಡವೆನಿಸಿತು.

'ಎಲ್ಲೂ ದೂರ ಹೋಗೊಲ್ಲ. ಇಲ್ಲೇ ಮೂರನೇ ಕ್ರಾಸ್‌ನಲ್ಲಿ ನನ್ನ ಸ್ಟೂಡೆಂಟ್ಸ್ ರೂಂ ಮಾಡಿಕೊಂಡು ಇದ್ದಾರೆ, ಹೋಗಿ ಬರುವೆ' ಎಂದು ಅವಳ ಉತ್ತರಕ್ಕೂ ಕಾಯದೆ ಕೆಳಗಿಳಿದು ಬಂದ.

***

ಹರೀಶ್ ಖಾಸಗಿ ಕಾಲೇಜೊಂದರಲ್ಲಿ ಉಪನ್ಯಾಸಕನಾಗಿ ಸೇರುವ ಮುನ್ನ ತನ್ನ ಅಣ್ಣ ಗಿರೀಶ್‌ನೊಡನೆ ಸೇರಿ ಒಂದು 'ವೆಲ್‌ನೆಸ್ ಸೆಂಟರ್'ನ ಸದಸ್ಯತ್ವವನ್ನು ಪಡೆದುಕೊಂಡು ಆರೋಗ್ಯಕ್ಕೆ ಸಂಬಂಧಿಸಿದ ಸಪ್ಲಿಮೆಂಟ್ ಪ್ರಾಡಕ್ಟ್‌ಗಳನ್ನು ಪರಿಚಯಿಸುವ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದ. ಅವನ ಫೇಸ್‌ಬುಕ್ ಮತ್ತು ಇನ್‌ಸ್ಟಾದಲ್ಲಿದ್ದವರಿಗೆ ಸಪ್ಲಿಮೆಂಟ್ ಪ್ರಾಡಕ್ಟ್‌ಗಳನ್ನು ಪರಿಚಯಿಸಿದ್ದಲ್ಲದೆ, ಯೂಟ್ಯೂಬ್‌ನಲ್ಲಿಯೂ ಅವುಗಳ ಬಗ್ಗೆ ಉಪನ್ಯಾಸ ಮಾಲಿಕೆಯನ್ನು ಆರಂಭಿಸಿದ್ದ. ಅವನಿಂದ ಮಾಹಿತಿಯನ್ನು ಕೇಳಿ ಅದೆಷ್ಟೋ ಮಂದಿ ಅವನ ಡಿಪಿಯಲ್ಲಿದ್ದ ಫೋನ್ ನಂಬರ್‌ಗೆ ಕರೆ ಮಾಡಿ ಮತ್ತಷ್ಟು ವಿಷಯಗಳನ್ನು ಪಡೆಯುತ್ತಿದ್ದರು. ಅವನಿಗೆ ತಾನೊಂದು ಆತ್ಮಗೌರವವಿಲ್ಲದ ಕೆಲಸವನ್ನು ಮಾಡಿ, ಜನರಿಗೆ ತಪ್ಪು ಮಾಹಿತಿಯನ್ನು ನೀಡಿ ಮೋಸ ಮಾಡುತ್ತಿರುವೆನೆನ್ನುವ ಆತಂಕ